# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** **:1181**
**ಸದಸ್ಯರ ಹೆಸರು** **:ಡಾ. ಆರತಿ ಕೃಷ್ಣ (ನಾಮನಿರ್ದೇಶಿತರು)**
**ಉತ್ತರಿಸುವ ದಿನಾಂಕ** **:17.12.2025**
**ಉತ್ತರಿಸುವ ಸಚಿವರು** **:ಕಂದಾಯ ಸಚಿವರು**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಕರ್ನಾಟಕದಲ್ಲಿ ಅದರಲ್ಲೂ ಚಿಕ್ಕಮಗಳೂರು ಜಿಲ್ಲಾ ವ್ಯಾಪ್ತಿಯಲ್ಲಿನ ರೈತರುಗಳಿಗೆ ಈ ಹಿಂದೆ ಅಂದರೆ 1974-75ನೇ ಸಾಲಿನಲ್ಲಿ ಹಂಗಾಮಿ ಸಾಗುವಳಿ ಚೀಟಿಗಳನ್ನು (ಪ್ರಾವಿಜನಲ್) ಸರ್ಕಾರದಿಂದ ನೀಡಲಾಗಿದ್ದು, ಆ ಜಾಗಗಳಲ್ಲಿ ರೈತರುಗಳು ಕೃಷಿ ಚಟುವಟಿಕೆಗಳನ್ನು ಮಾಡುತ್ತಿದ್ದು; ಇಲ್ಲಿಯ ತನಕ ಇವರುಗಳಿಗೆ ಶಾಶ್ವತ ಹಕ್ಕು ಪತ್ರ ಅಥವಾ ಖಾತೆ ಮಾಡಿಸದಿರುವುದಕ್ಕೆ ಕಾರಣವೇನು; | ಸರ್ಕಾರದ ಆದೇಶ ಸಂಖ್ಯೆ ಆರ್‌ಡಿ 105 ಎಲ್‌ಜಿಪಿ 77 ದಿನಾಂಕ: 01-09-1977 ರಲ್ಲಿ 1977ಕ್ಕಿಂತ ಹಿಂದೆ ಸರ್ಕಾರಿ ಜಮೀನುಗಳನ್ನು ಅನಧಿಕೃತ ಸಾಗುವಳಿ ಮಾಡಿಕೊಂಡಂತಹ ಭೂರಹಿತರಿಗೆ ಭೂ ಮಂಜೂರಿ ನಿಯಮಗಳಡಿ ಅಧಿಕಾರದ ಮಿತಿಯಲ್ಲಿ ಕೆಲವೊಂದು ನಿಬಂಧನೆಗಳನ್ನು ವಿಧಿಸಿ ಜಮೀನುಗಳನ್ನು ಸಕ್ರಮೀಕರಿಸಲು ನಿರ್ದೇಶನವನ್ನು ನೀಡಲಾಗಿರುತ್ತದೆ.<br><br>ಮೇಲ್ಕಂಡ ಸರ್ಕಾರದ ಆದೇಶದ ಪ್ರಕಾರ ಅನಧಿಕೃತ ಸಾಗುವಳಿ ಸಕ್ರಮ ಯೋಜನೆಯಡಿ ತಾತ್ಕಾಲಿಕ (ಪ್ರಾವಿಜನಲ್) ಸಾಗುವಳಿ ಚೀಟಿ ನೀಡಿರುವ ಪ್ರಕರಣಗಳಲ್ಲಿ ಭೂ ಮಂಜೂರಿಯನ್ನು ಸಕ್ರಮಗೊಳಿಸುವ ಕುರಿತು ಸರ್ಕಾರದ ಪತ್ರ ಸಂಖ್ಯೆ ಆರ್ ಡಿ 46 ಎಲ್‌ಜಿಯು 2008 ದಿನಾಂಕ:02.06.2009ರ ಪತ್ರದಲ್ಲಿ ನಿರ್ದೇಶನಗಳನ್ನು ನೀಡಿದ್ದು, ಅದರಂತೆ, ತಾತ್ಕಾಲಿಕ (ಪ್ರಾವಿಜನಲ್) ಸಾಗುವಳಿ ಚೀಟಿ ನೀಡಿರುವ ಅರ್ಹ ಪ್ರಕರಣಗಳಲ್ಲಿ, ಖಾಯಂಗೊಳಿಸುವ ಕುರಿತು ಕ್ರಮವಹಿಸಲಾಗುತ್ತಿದೆ. |
| (ಆ) | ಇದರಿಂದಾಗಿ, ಸರ್ಕಾರದ ಯಾವುದೇ ಯೋಜನೆಗಳು ಇವರುಗಳಿಗೆ ತಲುಪುತ್ತಿಲ್ಲ. ಸದರಿಯವರುಗಳಿಗೆ ಖಾಯಂ ಸಾಗುವಳಿ ಚೀಟಿ ಮತ್ತು ಖಾತೆ ಮಾಡಿಕೊಡುವ ಬಗ್ಗೆ ಸರ್ಕಾರದಿಂದ ಯಾವ ಕ್ರಮಕೈಗೊಳ್ಳಲಾಗಿದೆ? | ಸರ್ಕಾರದ ಪತ್ರ ಸಂಖ್ಯೆ ಆರ್ ಡಿ 46 ಎಲ್‌ಜಿಯು 2008 ದಿನಾಂಕ: 02-06-2009ರ ಪತ್ರದಲ್ಲಿನೀಡಿರುವ ನಿರ್ದೇಶನಗಳಂತೆ ತಾತ್ಕಾಲಿಕ (ಪ್ರಾವಿಜನಲ್) ಸಾಗುವಳಿ ಚೀಟಿ ನೀಡಿರುವ ಅರ್ಹ ಪ್ರಕರಣಗಳಲ್ಲಿ ಖಾಯಂಗೊಳಿಸುವ ಕುರಿತು ಕ್ರಮವಹಿಸಲಾಗುತ್ತಿದೆ. |

(ಕಡತ ಸಂಖ್ಯೆ: ಆರ್‌ಡಿ 73 ಎಲ್‌ಜಿಯು 2025)

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು